**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>**

**C.C. - 22-22** **ಪಿಡಬ್ಲ್ಯೂ ಃ** **<u>12</u>**

**ಸಿಡಬ್ಲ್ಯೂ ಃ** **<u>22</u>**

ಸಾಕ್ಷಿದಾರರ ಹೆಸರು ಃ ನಾಗಯ್ಯ ಕಾಡದೇವರ

ತಂದೆ ಹೆಸರು ಃ ಚಂದ್ರಶೇಖರ

ವಯಸ್ಸು ಃ 43 ವರ್ಷ

ಉದ್ಯೋಗ ಃ ಇನ್ಸ್‌ಪೆಕ್ಟರ

ವಾಸಸ್ಥಳ ಃ ರಾಣೆಬೆನ್ನೂರ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 25.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಡಿಸೆಂಬರ 2020 ರಿಂದ ಆಗಸ್ಟ 2023 ವರೆಗೆ ಪೂರ್ವ ಸಂಚಾರಿ ಪೋಲಿಸ ಠಾಣೆ ಯಲ್ಲಿ ಇನ್ಸಪೆಕ್ಟರ ಅಂತಾ ಸೇವೆ ಸಲ್ಲಿಸಿದ್ದೇನೆ.

ದಿಃ 4.10.2021 ರಂದು ಸದರಿ ಪ್ರಕರಣದ ಕಡತವನ್ನು ಚಾಸಾ-21 ರವರಿಂದ ಸ್ವೀಕಾರ ಮಾಡಿ ಪರಿಶೀಲನೆ ಮಾಡಿದ್ದೇನೆ.

ದಿಃ 5.10.2021 ರಂದು ಚಾಸಾ-16 ರವರು ಮೃತನ ವಿಶ್ರಾ ವನ್ನು ಕಿಮ್ಸ ಆಸ್ಪತ್ರೆಯಿಂದ ತಂದು ಹಾಜರಪಡಿಸಿದ್ದು, ಚಾಸಾ-4 ಹಾಗೂ 5 ರವರ ಸಮಕ್ಷಮ ಸಂಜೆಃ 4 ರಿಂದ 5 ಗಂಟೆವರೆಗೆ ನಿಪಿ.9 ರಂತೆ ಪಂಚನಾಮೆ ಮಾಡಿ ವಿಶ್ರಾ ಬಾಟಲಿಗಳನ್ನು ಅಮಾನತ್ತಪಡಿಸಿಕೊಂಡು, ಆರ್ ಎಫ್ ಎಸ್ ಎಲ್ ಗೆ ಕಳಿಸಿಕೊಟ್ಟಿದ್ದೇನೆ. ಅದೇ ದಿನ ಅಪಘಾತ ಕ್ಕೀಡಾದ ಬೈಕ್ ನಂಃ ಕೆಎ-25 ಇ ಎಲ್ - 1788 ನೇದ್ದರ ಮಾಲಿಕ ದಾಖಲೆ ಹಾಜರಪಡಿಸಿದ್ದು, ದಾಖಲೆಗಳನ್ನು ಸ್ವೀಕಾರ ಮಾಡಿ ಇಂಡಮಿನಿಟಿ ಬಾಂಡ ಪಡೆದು ವಾಹನ ಬಿಡುಗಡೆ ಮಾಡಿದ್ದೇನೆ. ಸದರಿ ಇಂಡಮಿನಿಟಿ ಬಾಂಡನ್ನು ನಿಪಿ.26 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿ ನಿಪಿ.26-ಎ ಎಂದು ಗುರುತಿಸಲಾಯಿತು. ದಿಃ 12.10.2021 ರಂದು ಚಾಸಾ-20 ರವರಿಂದ ವಾಹನ ಯಾಂತ್ರಿಕ ವರದಿಯನ್ನು ಸ್ವೀಕಾರ ಮಾಡಿ ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ಸದರಿ ವರದಿಯನ್ನು ಈಗಾಗಲೇ ನಿಪಿ.19 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿ ನಿಪಿ.19-ಎ ಎಂದು ಗುರುತಿಸಲಾಯಿತು.

ಚಾಸಾ-17 ರವರಿಂದ ಮಾಸ್ಟರ ಜೈಯಸನ್ ಮ್ಯಾಥ್ಯೂ ರವರ ಗಾಯದ ಪ್ರಮಾಣ ಪತ್ರವನ್ನು ಸ್ವೀಕಾರ ಮಾಡಿದ್ದು ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ.14 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿ ನಿಪಿ.14-ಎ ಎಂದು ಗುರುತಿಸಲಾಯಿತು. ದಿಃ 1.12.2021 ರಂದು ಅಪಘಾತ ಕ್ಕೀಡಾದ ಲಾರಿ ನಂಃ ಕೆಎ-25 /ಎಎ-3504 ನೇದ್ದರ ಮಾಲಿಕ ಮಾನ್ಯ ನ್ಯಾಯಾಲಯದಿಂದ ಬಿಡುಗಡೆ ಆದೇಶವನ್ನು ಪಡೆದುಕೊಂಡು ಬಂದಿದ್ದು, ಈ ಕುರಿತು, ಚಾಸಾ-6 ಹಾಗೂ 7 ರವರ ಸಮಕ್ಷಮ ಸಂಜೆಃ 5 ರಿಂದ 6 ಗಂಟೆವರೆಗೆ ಪಂಚನಾಮೆ ಮಾಡಿ ಪೊಟೋ ತೆಗೆದು ಬಿಡುಗಡೆ ಮಾಡಿದ್ದು, ಸದರಿ ಪಂಚನಾಮೆ ನಿಪಿ.13 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿ ನಿಪಿ.13-ಎ ಎಂದು ಗುರುತಿಸಲಾಯಿತು. ಸದರಿ ಪೊಟೋವನ್ನು ಈಗಾಗಲೇ ನಿಪಿ.7 ಎಂದು ಗುರುತಿಸಲಾಗಿದೆ. ಚಾಸಾ-19 ರವರಿಂದ ಆರ್ ಎಫ್ ಎಸ್ ಎಲ್ ವರದಿಯನ್ನು ಪಡೆದುಕೊಂಡು ಅಂತಿಮ ಅಭಿಪ್ರಾಯಕ್ಕೆ ಚಾಸಾ-18 ರವರಿಗೆ ಪತ್ರ ಬರೆದಿದ್ದೇನೆ. ಸದರಿ ಎಫ್ ಎಸ್ ಎಲ್ ವರದಿ ನಿಪಿ.16 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿ ನಿಪಿ.16-ಎ ಎಂದು ಗುರುತಿಸಲಾಯಿತು. ದಿಃ 22.12.2021 ರಂ ದು ಚಾಸಾ-18 ರವರಿಂದ ಮೃತನ ಪಿ ಎಂ ವರದಿ ಹಾಗೂ ಅಂತಿಮ ವರದಿ ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ಸದರಿ ಪಿ ಎಂ ವರದಿ ನಿಪಿ.17 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿ ನಿಪಿ.17-ಎ ಎಂದು ಗುರುತಿಸಲಾಯಿತು. ಅಂತಿಮ ವರದಿ ನಿಪಿ.18 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿ ನಿಪಿ.18-ಎ ಎಂದು ಗುರುತಿಸಲಾಯಿತು. ನಾನು ಚಾಸಾ-18 ರವರ ಹೆಸರು ಡಾಃ ಸಂತೋಷಕುಮಾರ ಪಿ. ಎಂದು ತನಿಖಾ ಕಾಲದಲ್ಲಿ ಹೇಳಿದ್ದು ಅದರ ಬದಲಾಗಿ ಡಾಃ ಅದಮ ಅಲಿ ನದಾಫ ಹೆಸರನ್ನು ಸೇರಿಸಿಕೊಳ್ಳಬೇಕೆಂದು ವಿನಂತಿ ಅರ್ಜಿ ನೀಡಿದ್ದೇನೆ. ಅದೇ ರೀತಿ ಚಾಸಾ-16 ರವರ ಹೆಸರು ಪಿ ಡಿ ಮನಸಾಲಿ ರವರ ಬದಲಾಗಿ ಮರ್ತುಜಾಖಾದರ ತಂದೆಃ ರೆಹಮಾನಸಾಬ ಮಂಗಳೂರ ಎಂದು ಪರಿಗಣಿಸಬೇಕೆಂದು ವಿನಂತಿ ಅರ್ಜಿ ನೀಡಿದ್ದೇನೆ. ಆರೋಪಿಗಳ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಇರುವುದರಿಂದ ಅವರ ವಿರುದ್ಧ ಅಂತಿಮ ವರದಿ ಸಲ್ಲಿಸಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ವಿ ಬಿ ವಕೀಲರಿಂದಃ**

ಚಾಸಾ-21 ರವರ ಕೊಟ್ಟ ಕಡತದ ಆಧಾರದ ಮೇಲೆ ಅಂತಿಮ ವರದಿ ಸಲ್ಲಿಸಿದ್ದೇನೆ ಅಂದರೆ ಸರಿ. ನಾನು ಸ್ಥಳಕ್ಕೆ ಹೋಗಿ ಹೆಚ್ಚಿನ ವಿಚಾರಣೆ ಮಾಡಿದ್ದೇನೆ. ಅದರ ಬಗ್ಗೆ ಹೇಳಿಕೆ ಹಾಗೂ ಇತರೆ ದಾಖಲೆಗಳಿಲ್ಲ.

ಟಿಪ್ಪರ ಲಾರಿ ಹಾಗೂ ಬೈಕ್ ಪಿಂಟೋ ಸರ್ಕಲ್ ಕಡೆಯಿಂದ ಗದಗ ಕಡೆಗೆ ಹೊರಟಿದ್ದವು. ಮೃತ ವ್ಯಕ್ತಿ ಮದ್ಯ ಸೇವನೆ ಮಾಡಿದ ಬಗ್ಗೆ ಅಂತಿಮ ವರದಿಯಲ್ಲಿ ಹೇಳಿ ಆತನನ್ನು ಆರೋಪಿಯನ್ನಾಗಿ ಮಾಡಲಾಗಿದೆ. ನಿಪಿ.18 ರಲ್ಲಿ ಮದ್ಯ ಸೇವನೆ ಮಾಡಿದ ಬಗ್ಗೆ ನಮೂದು ಇದೆ ಅಂದರೆ ಸರಿ. ಪಿಂಟೋ ಸರ್ಕಲ್ ಕಡೆಯಿಂದ ಗದಗ ಕಡೆಗೆ ಸುಮಾರು ವಾಹನಗಳು ಹೋಗುತ್ತವೆ ಅಂದರೆ ಸರಿ. ವಾಹನಗಳು ಅಲ್ಲಿ ನಿಧಾನವಾಗಿ ಹೋಗಬೇಕೆಂದರೆ ಸರಿ. ಪಿಂಟೋ ಸರ್ಕಲ್ ದಿಂದ ಹೋಗುವಾಗ ಬಲಗಡೆಗೆ ರೇಲ್ವೆ ನಿಲ್ದಾಣ ರೋಡ ಹಾಗೂ ಎಡಗಡಗೆ ಗದಗ ರೋಡ ಇದೆ ಅಂದರೆ ಸರಿ. ಪಿಂಟೋ ಸರ್ಕಲ್ ದಲ್ಲಿ ಸಿ ಸಿ ಕ್ಯಾಮರಾ ಇದ್ದ ಬಗ್ಗೆ ಪರಿಶೀಲನೆ ಮಾಡಿದ್ದೇವೆ, ಆದರೆ ಅಲ್ಲಿ ಇಲ್ಲ. ಸಿ ಸಿ ಕ್ಯಾಮರಾ ಕಂಡುಬರದ ಕಾರಣ ಅಂತಿಮ ವರದಿಯಲ್ಲಿ ಹೇಳಿಲ್ಲ. ಬೈಕ ಸವಾರ ಹುಬ್ಬಳ್ಳಿ ರೇಲ್ವೆ ನಿಲ್ದಾಣದ ಕಡೆಗೆ ಹೊರಟಿದ್ದನು ಅಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗದೇ ಹೇಳಿಕೆ ಪಡೆಯದೆ ಠಾಣೆಯಲ್ಲಿ ಕುಳಿತು ಅಂತಿಮ ವರದಿ ಸಲ್ಲಿಸಿರುವುದರಿಂದ ನನಗೇನು ಗೊತ್ತಿಲ್ಲ ಅಂದರೆ ಸರಿಯಲ್ಲ. ಮೃತ ವ್ಯಕ್ತಿ ಮದ್ಯ ಸೇವನೆ ಮಾಡಿದ್ದರಿಂದ ಸ್ಕಿಡ್ಡಾಗಿ ಬಿದ್ದು, ತಲೆಗೆ ಪೆಟ್ಟಾಗಿದ್ದರಿಂದ ಆತ ಮರಣ ಹೊಂದಿದ್ದಾನೆ ಅಂದರೆ ಸರಿಯಲ್ಲ. ಘಟನೆಗೂ ಹಾಗೂ ಆರೋಪಿಗೂ ಸಂಬಂಧವಿಲ್ಲ ಅಂದರೆ ಸರಿಯಲ್ಲ. ಟಿಪ್ಪರ ಲಾರಿ ಚಾಲಕನಿಂದ ಅಪಘಾತ ವಾಗಿಲ್ಲ ಅಂದರೆ ಸರಿಯಲ್ಲ. ನಾನು ನಿಜವಾಗಿ ತನಿಖೆ ಮಾಡಿದ್ದರೆ ಡಾಃ ಅದಮ ಅಲಿ ನದಾಫ ಹಾಗೂ ಮರ್ತುಜಾ ಖಾದರ ರವರ ಹೆಸರನ್ನು ತನಿಖೆ ವರದಿಯಲ್ಲಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸುಳ್ಳು ಅಂತಿಮ ವರದಿ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮೃತರ ಕುಟುಂಬದ ಸದಸ್ಯರಿಗೆ ಪರಿಹಾರ ಸಿಗಲಿ ಎಂದು ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.